ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ    EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com    ಇ-ಪೇಪರ್bidarvani.online    bidarvani    bidarvani@gmail.com    Whatsapp    Contact:9148471077

KARKAN/77693/2019    ಸಂಪುಟ:08    ಸಂಚಿಕೆ:196    ದಿನಾಂಕ:04.11.2025    ಮಂಗಳವಾರ    ಪುಟ.4    ಬೆಲೆ:02 ರೂ    ಮೊ.9945793175

## ಎಂಟನೇ ಸುತ್ತಿನ ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಚಾಲನೆ

ಬೀದರ.ನ.03:ನ.3 ರಿಂದ ಆ.3 ರವರೆಗೆ ಜಿಲ್ಲೆಯಾದ್ಯಂತ ರೈತರ ಮನೆ ಬಾಗಿಲಿಗೆ ಲಸಿಕೆದಾರರು ಆಗಮಿಸಿ ದನ, ಎಮ್ಮೆಗಳಿಗೆ ಎಫ್‌ಎಂಡಿ ಲಸಿಕೆಯನ್ನು ಉಚಿತವಾಗಿ ನೀಡುತ್ತಾರೆ. ರೈತಬಾಂಧವರು ತಮ್ಮ ಎಲ್ಲ ಜಾನುವಾರುಗಳಿಗೆ ತಪ್ಪದೇ ಲಸಿಕೆಯನ್ನು ಹಾಕಿಸಿಕೊಂಡು ರೋಗವನ್ನು ತಡೆಗಟ್ಟಲು ಮತ್ತು ಎಫ್‌ಎಂಡಿಸಿಪಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಅವರು ಸೋಮವಾರ ರಾಷ್ಟ್ರೀಯ ಜಾನುವಾರು ನಿಯಂತ್ರಣ ಕಾರ್ಯಕ್ರಮದಡಿ ಬೀದರನ ಲಕ್ಷ್ಮಿಸತ್ಯನಾರಾಯಣ ಗೋಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 8ನೇ ಸುತ್ತಿನ ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮದಲ್ಲಿ ಗೋಮಾತೆಗೆ ಪೂಜೆ ಸಲ್ಲಿಸಿ, ಲಸಿಕೆ ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ಬೀದರ ಪಶು ಪಾಲನಾ ಇಲಾಖೆಯ ಉಪನಿರ್ದೇಶಕರಾದ ಡಾ. ನರಸಪ್ಪ ಎ.ಡಿ. ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪಶು ಪಾಲನಾ ಇಲಾಖೆಯ ಡಾ.ಯೋಗೇಂದ್ರ ಕುಲಕರ್ಣಿ, ಡಾ.ಶೇಶಪ್ಪಾ,ಡಾ. ಓಂಕಾರ ಪಾಟೀಲ್, ಡಾ. ನೀಲಕಂಠ, ಡಾ. ಶ್ರೀಕಾಂತ ಬಿರಾದಾರ, ಡಾ.ರವಿಕಾಂತ ಕೊಟಗೆ, ಡಾ.ಮೋಸಿನ್, ಡಾ. ಆದಿತ್ಯ, ಡಾ. ಜಕಿಉದ್ದೀನ್ ಡಾ. ಮಿರ್ಜಾ,

ಡಾ.ಸಂಗೀತಾ, ಡಾ.ಸುಧಾರಾಣಿ ಡಾ. ಮುಜೀಬ ಡಾ. ಸೋಮಶೇಖರ, ಪ್ರಭಾಕರ ಮೈಲಾರ, ಅಧ್ಯಕ್ಷರು ಗೋಶಾಲೆ ಹೆಡೆ ಕಾರ್ಯದರ್ಶಿಗಳು, ಇಲಾಖೆಯ ಸಿಬ್ಬಂದಿಗಳಾದ ಸುನೀಲ್‌ಕುಮಾರ, ಇಲಿಯಾಸ್, ಸುಜಾತಾ, ಜಗನ್ನಾಥ ವಿಠಲ್, ಅಣ್ಣಾರಾವ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮ ನಿರೂಪಣೆ ಡಾ. ಜಗದೀಶ ನಿರ್ವಹಿಸಿರುತ್ತಾರೆ.

## ನ.5 ರಂದು ಶ್ರೀ ಕಂಠೀರವ ಸ್ಟುಡಿಯೋಸ್ ಅಧ್ಯಕ್ಷ ಮಹಬೂಬ್ ಪಾಷ್ ಅವರ ಬೀದರ ಜಿಲ್ಲಾ ಪ್ರವಾಸ

ಬೀದರ,ನ.03:ಬೆಂಗಳೂರು ಶ್ರೀ ಕಂಠೀರವ ಸ್ಟುಡಿಯೋಸ್ (ನಿ) ಅಧ್ಯಕ್ಷರಾದ ಮಹಬೂಬ್ ಪಾಷ ಅವರು ನವೆಂಬರ್.5 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ನವೆಂಬರ್.5 ರಂದು ಬೆಳಿಗ್ಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು ಬೆಳಿಗ್ಗೆ 9 ಗಂಟೆಗೆ ಬೀದರ ಆಗಮಿಸಿ ಬೀದರನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು ನಂತರ ಪತ್ರಿಕಾಗೋಷ್ಠಿಯನ್ನು ನಡೆಸಿ, ಸರ್ಕಾರಿ ಅತಿಥಿ ಗೃಹದಲ್ಲಿ ತಂಗಲಿದ್ದಾರೆ.

ನವೆಂಬರ್.6 ರಂದು ಬೆಳಿಗ್ಗೆ 8 ಗಂಟೆಗೆ ಬೀದರನಿಂದ ನಿರ್ಗಮಿಸಲಿದ್ದಾರೆಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಘಾಟ ಬೋರಳ ಸಮೀಪದ ಶಂಕರಲಿಂಗ ಪವಿತ್ರವಾದ ತಾಣದಲ್ಲಿ ವನ ಭೋಜನ
## ವನ ಭೋಜನದಿಂದ ಸಂಬಂಧ ಬೆಸೆಯುತ್ತವೆ..ಪ್ರೊ. ಚಂದ್ರಕಾಂತ

ಬೀದರ.ನ.03:ವ್ಯಕ್ತಿಗಳ ಬದುಕು ಭೌತಿಕವಾಗಿ ಬೆಳೆದಿದ್ದರೂ ಹೃದಯವಂತಿಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಭೋಜನ ಕೂಟ ವನ ಭೋಜನಗಳು ಸಂಬಂಧ ಬೆಸೆಯಲು ಅತ್ಯಂತ ಪ್ರಯೋಜನ ಎಂದು ನಿವೃತ್ತ ಪ್ರಾಚಾರ್ಯರಾದ ಪ್ರೊ. ಚಂದ್ರಕಾಂತ ಬಿರಾದಾರ ನುಡಿದರು.

ವಚನ ಚಾರಿಟೇಬಲ್ ಸೊಸೈಟಿ ಹಾಗೂ ವಚನಾನುಭವ ವೇದಿಕೆ ಅರ್ವತ್ತು ಕುಟುಂಬಗಳ ಸದಸ್ಯರು ಘಾಟಬೋರಳ ಸಮೀಪದ ಶಂಕರಲಿಂಗ ಪವಿತ್ರವಾದ ಪರಿಸರ ತಾಣದಲ್ಲಿ ವನ ಭೋಜನದಲ್ಲಿ ಪ್ರೊ. ಚಂದ್ರಕಾಂತ ಬಿರಾದಾರ ಮುಖ್ಯ ಅತಿಥಿಗಳಾಗಿ. ಇಂದು ಪ್ರತಿಯೊಬ್ಬರೂ ಮೊಬೈಲ್ ನಲ್ಲಿ ಬೆರೆತು ಆತ್ಮೀಯ ಬಂಧುತ್ವ/ಸಂಭಂಧ ಮಾಯವಾಗ ತೊಡಗಿದೆ. ಇದರಿಂದ ಸಮುದಾಯಕ್ಕೆ ಹೊಡೆತ. ನಾವೆಲ್ಲರೂ ಒಬ್ಬರನೊಬ್ಬರು ಅರಿತು ಒಂದೆಡೆ ಸೇರಿಕೊಂಡು ಭಾವನೆಗಳನ್ನು ಹಂಚಿಕೊಳ್ಳಲು ಇದು ಪೂರಕವಾಗಲಿದೆ.

ಯಾಂತ್ರಿಕವಾದ ಧಾವಂತದ ಬದುಕಿನಲ್ಲಿ ಯಾರಿಗೂ ಸಮಯವಿಲ್ಲ ಆದರೆ ಮಾಡುವುದಂತು ಏನೇನು ಇಲ್ಲ. ವಚನ ಚಾರಿಟೇಬಲ್ ಸೊಸೈಟಿ ಒಂದು ತಾತ್ವಿಕ ಸಮುದಾಯ ನಿರ್ಮಾಣ ಮಾಡಲು ಕಳೆದ ಐದು ವರ್ಷಗಳಿಂದ ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತನ್ನನ್ನೆ ತಾನು ತೊಡಗಿಸಿಕೊಂಡು ಮುನ್ನಡೆಯುತ್ತಿರುವುದು ಶ್ಲಾಘನೀಯ. ಅಲ್ಲಮಪ್ರಭು ನಾವದಗೇರೆ ಹಾಗೂ ಶಿವಕುಮಾರ ಸಾಲಿ ಅನೇಕ ಸಂಕಷ್ಟ ಗಳ ಸರ ಮಾಲೆಯಲ್ಲೂ ವಿಚಲಿತರಾಗದೆ ಮಾಡುವ ಕೆಲಸ ಎಲ್ಲರನ್ನು ಮಂತ್ರ ಮುಗ್ಧಗೊಳಿಸಿದೆ ಎಂದರು.



## ವಿಶ್ವ ಭಾವೈಕ್ಯತೆ ಭಾಷೆ ಕನ್ನಡ ಕಾಯಕದ ಭೂಮಿ ಕರ್ನಾಟಕ–ಸಂಸದ ಶ್ರೀ ಸಾಗರ ಖಂಡ್ರೆ

ಬೀದರ.ನ.03:ನಗರದ ಡಾ.ಬಿ.ಆರ್ ಅಂಬೇಡ್ಕರ ವೃತ್ತದಲ್ಲಿ ಶನಿವಾರ ಸಂಜೆ 7 ಗಂಟೆಯಿಂದ 10–30 ಗಂಟೆ ವರೆಗೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಶ್ರೀ ಚಾಂದೂರ ಮೈಸಮ್ಮ ಸಾಮಾಜಿಕ ಸಾಂಸ್ಕೃತಿಕ ಹಾಗೂ ಕಲಾ ಚಾರಿಟೇಬಲ್ ಟ್ರಸ್ಟ ಬೀದರ ಇವರ ಸಂಯುಕ್ತಾಶ್ರಯದಲ್ಲಿ 70 ನೇ ಕನ್ನಡ ರಾಜ್ಯೋತ್ಸವ ರಾಜ್ಯ ಮಟ್ಟದ ಸಾಹಿತ್ಯ ಸಾಂಸ್ಕೃತಿಕ ಸಂಭ್ರಮ ಬೀದರ ಹಬ್ಬ ಕಾರ್ಯಕ್ರಮವನ್ನು ಸಂಸದರಾದ ಶ್ರೀ ಸಾಗರ ಖಂಡ್ರೆ ಉದ್ಘಾಟನೆ ಮಾಡಿ, ವಿಶ್ವ ಭಾವೈಕ್ಯತೆ ಭಾಷೆ ಕನ್ನಡ ಭಾಷೆಯಾಗಿದೆ ಕಾಯಕದ ಭೂಮಿ ಕರ್ನಾಟಕವಾಗಿದೆ.

ದೇಶದ ಸ್ವಾತಂತ್ರ್ಯವಾದ ಬಳಿಕ ಭಾಷವಾರು ಪ್ರಾಂತ, ರಾಜ್ಯ ರಚನೆಯಾಯಿತು. ಮುಂಬೈ,ಬೆಳಗಾವಿ ಹೈದ್ರಬಾದ ಮೈಸೂರ ಭಾಗವನ್ನು ಮೈಸೂರು ರಾಜ್ಯವೆಂದು ಘೋಷಣೆ ಮಾಡಲಾಯಿತು.51 ವರ್ಷಗಳ ಹಿಂದೆ ಡಿ,ದೇವರಾಜ ಅರಸು ಮುಖ್ಯಮಂತ್ರಿಗಳಾಗಿರುವಾಗ ಕನ್ನಡ ಭಾಷೆ ಮಾತನಾಡುವ ನಾಡನ್ನು ಮೈಸೂರು ರಾಜ್ಯಕ್ಕೆ



ಕರ್ನಾಟಕವೆಂದು ನಾಮಕರಣ ಮಾಡಲಾಯಿತು. ಕವಿಗಳು ಹೇಳಿರುವ ಹಾಗೆ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಎನ್ನುವಂತೆ ನಾವು ನಮ್ಮ ಬೀದರ ಗಡಿಭಾಗದಲ್ಲಿ ಮರಾಠಿ, ಹಿಂದು ಉರ್ದು, ತೆಲುಗು ಮಾತನಾಡುವ ಜನರೊಂದಿಗೆ ಕನ್ನಡ ಸಾಮಾಜಿಕ ಭಾಷೆ ಸಂಪರ್ಕಮಾಡಿಕೊಳ್ಳಬೇಕು. ರಾಷ್ಟ್ರ ಕವಿ ಕುವೆಂಪು, ವಿಶ್ವಭಾಷೆಯಾಗಿಸಿದ್ದಾರೆ.

ಸ್ವಾಗತ, ಪ್ರಾಸ್ತಾವಿಕ ಮಾತುಗಳು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಲಬುರ್ಗಿ ವಿಭಾಗಿ ಅಧ್ಯಕ್ಷ ಉಮೇಶಕುಮಾರ ಸೋರಳ್ಳಿಕರ್ ಮಾತನಾಡಿ, ಬಹು ಗಡಿಗಳಿಂದ ಬಹು ಭಾಷೆ ಮಾತನಾಡುವ ಬೀದರ ಜಿಲ್ಲೆ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಹಸಿರಾಗಿಸಿಕೊಂಡು ಉಸಿರಾಗಿಸಿಕೊಂಡಿದೆ.

ಕಳೆದ ಎರಡು ವರ್ಷಗಳಿಂದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ನೊಂದಾಯಿತ ಸಂಘ ಸಂಸ್ಥೆಗಳಿಗೆ ಗಡಿಭಾಗದಲ್ಲಿ ಕನ್ನಡ ಭಾಷೆ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ಮಾಡಲು ಹಣವನ್ನು ನೀಡುವುದು ನಿಲ್ಲಿಸಿದೆ ಆದರೆ ಹೊರರಾಜ್ಯದ ಕನ್ನಡ ಕಾರ್ಯಕ್ರಮಗಳಿಗೆ ಹಣವನ್ನು ನೀಡುತ್ತಿದೆ.

ಅಧಿಕಾರಿ ವರ್ಗದವರು ಮಾಡುತ್ತಿರುವ ತಾರತಮ್ಯವಾಗಿದೆ ಇದನ್ನು ಸರಿಪಡಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ 2024–25 ಮತ್ತು 2025–2026 ನೇ ಸಾಲಿನಗೆ ಅರ್ಜಿಯನ್ನು ಕರೆಯಬೇಕು. ನಾಡಿನಲ್ಲಿ ಪ್ರತಿನಿತ್ಯ ಕನ್ನಡಕ್ಕಾಗಿ ದುಡಿಯುತ್ತಿರುವ ಸಂಘಸಂಸ್ಥೆಗಳಿಗೆ ಅನುಧಾನ ನೀಡಬೇಕು. ವಿಶೇಷ ಉಪನ್ಯಾಸವನ್ನು ಪ್ರೋ. ಶಿವಶರಣಪ್ಪ ಹುಗ್ಗೆಪಾಟೀಲ್ ಮಾಡಿದರು.12 ನೇ ಶತಮಾನದಲ್ಲಿ ವಚನಸಾಹಿತ್ಯದ ಮೂಲಕ ಸಮಾನತೆಯ ಸಂಘರ್ಷದ ಕ್ರಾಂತಿ ನಮ್ಮಗೆ ದಾರಿದಿಪವಾಗಿದೆ. ಎಲ್ಲಾ ಧರ್ಮದವರನ್ನು ಎಲ್ಲಾ ಭಾಷಿಗರನ್ನು ಗೌರವಿಸುವ ಕನ್ನಡ ಉಳಿಸಿ ಬೆಳೆಸುವ ಕೀರ್ತಿ ನಮ್ಮ ಕನ್ನಡಿಗರಿಗೆ ಸಲ್ಲುತ್ತದೆ. ಭಾರತದಿಂದ ಜಗತ್ತಿಗೆ ಸಾಮ್ರಾಟನಾಗಿರುವ ಅಶೋಕ ಚಕ್ರವರ್ತಿ ಕನ್ನಡ ನೆಲಕ್ಕೆ ಬಂದಿದ್ದ ಕನ್ನಡ ಭಾಷೆಗೆ ಗೌರವಿಸಿದ.

## ಚಾಂಗಲೇರ ವೀರಭದ್ರೇಶ್ವರ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿರುವ ಪವಿತ್ರ ಸ್ನಾನ ಕುಂಡಕ್ಕೆ ಚಾಲನೆ

ಬೀದರ್.ನ.03:ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಚಾಂಗಲೇರ ವೀರಭದ್ರೇಶ್ವರ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿರುವ ಪವಿತ್ರ ಸ್ನಾನ ಕುಂಡಕ್ಕೆ ವಿಶೇಷ ಪೂಜೆ ಸಲ್ಲಿಸಿ ಪುಸ್ಪ ನಮನ ಸಲ್ಲಿಸಿ ಚಿಟಗುಪ್ಪ ಅಯ್ಯಪ್ಪಸ್ವಾಮಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ಮರುಳಾರಾಧ್ಯ ಶಿವಾಚಾರ್ಯರ ನೇತೃತ್ವದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಚಾಲನೆ ನೀಡಿದರು.

ಚಾಂಗಲೇರಾದಲ್ಲಿ ಬೇಡಿ ಬರುವ ಭಕ್ತಾದಿಗಳ ಕಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ನೀಡಿ ಹರಸುವ ಜಾಗೃತ ಪೀಠವಾಗಿದೆ. ಕೋಟ್ಯಂತರ ಭಕ್ತರ ಆರಾಧ್ಯ ವೈವವಾಗಿರುವ ವೀರಭದ್ರೇಶ್ವರ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತಾದಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ನಾವೆಲ್ಲರೂ ಹಗಲಿರುಳು ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ ವೀರಭದ್ರೇಶ್ವರರ ಭಕ್ತರಾದ ಉಧ್ಯಮಿ ವೀರಶೆಟ್ಟಿ ಪಾಟೀಲ್ ಅವರು ಪವಿತ್ರ ಸ್ನಾನ ಕುಂಡ ಬಹಳ ಉತ್ತಮವಾಗಿ ಸುಸಜ್ಜಿತವಾಗಿ ನಿರ್ಮಾಣ ಮಾಡಿಸಿದ್ದಾರೆ ದೇವಸ್ಥಾನಕ್ಕೆ ಬರುವ ಭಕ್ತರು ಸಹ ಸ್ನಾನ ಕುಂಡದಲ್ಲಿ ಸ್ವಚ್ಛತೆ ಕಾಪಾಡುವ ಮೂಲಕ ಪವಿತ್ರ ಸ್ನಾನ ಕುಂಡ ಬಳಸಿ ದೇವರ ದರ್ಶನ ಪಡೆಯಬೇಕು.


ಚಾಂಗಲೇರಾ ವೀರಭದ್ರೇಶ್ವರ ಜಾತ್ರೆ ನವೆಂಬರ್ 3 ರಿಂದ ಪ್ರಾರಂಭವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದ್ದು. ಈ ಜಾತ್ರೆಯಲ್ಲಿ ನವೆಂಬರ್ 5 ರಂದು ಬೆಳಿಗ್ಗೆ ಅಗ್ನಿ ತುಳಿಯುವ ಕಾರ್ಯಕ್ರಮ, ಸಂಜೆ ಅದ್ದೂರಿ ರಥೋತ್ಸವ ನಡೆಯಲಿದೆ. ವೀರಗಾಸಿ, ಡೊಳ್ಳು ಕುಣಿತ, ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರವಣಿಗೆಯ ಭಾಗವಾಗಿದ್ದು, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಭಾಗವಹಿಸುತ್ತಾರೆ.

ಜಾತ್ರೆಯ ಪ್ರಮುಖ ಕಾರ್ಯಕ್ರಮಗಳು ನ. 3 ರಂದು ಜಾತ್ರಾ ಮಹೋತ್ಸವ ಪ್ರಾರಂಭ, ಧಾರ್ಮಿಕ ವಿಧಿವಿಧಾನಗಳೊಂದಿಗೆ ಪೂಜೆ, ದೇವಾಲಯದ ಪಲ್ಲಕ್ಕಿ ಉತ್ಸವ ನಡೆಯಲಿದೆ. ನ. 5 ಬೆಳಗ್ಗೆ ವೀರಭದ್ರೇಶ್ವರ ದೇವರ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಮತ್ತು ರಥೋತ್ಸವ. ರಾತ್ರಿ ರಥೋತ್ಸವದ ನಂತರ ಗೀಗೀ ಪದದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ನ. 6 ಜಂಗೀ ಕುಸ್ತಿ ಮತ್ತು ಇತರ ಸ್ಪರ್ಧೆಗಳು ನಡೆಯಲಿವೆ ಕಳೆದ ಬಾರಿ ಜೋಕಾಲಿಯಲ್ಲಿ ಅವಘಡ ಸಂಭವಿಸಿದೆ ಈ ನಿಮಿತ್ತ ಪಾಲಕರು ಮಕ್ಕಳಿಗೆ ಒಂಟಿಯಾಗಿ ಆಟವಾಡಲು ಬಿಡಬೇಡಿ ತೀವ್ರ ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಜಾತ್ರೆಯಲ್ಲಿ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಭಕ್ತರು ಭಾಗವಹಿಸುತ್ತಾರೆ ದೇವಸ್ಥಾನದಲ್ಲಿ ಯಾವುದೇ ಕಾರಣಕ್ಕೂ ಮೂಲ ಸೌಕರ್ಯ ಕೊರತೆ ಕಂಡುಬರಬಾರದು ಎಂದು ದೇವಸ್ಥಾನದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದೇವಸ್ಥಾನದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವ ಮೆರವಣಿಗೆ ಭಜನೆ, ನಂದಿ ಕುಣಿತ, ಡೊಳ್ಳು ಕುಣಿತ, ವೀರಗಾಸಿ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ ಇದಕ್ಕೆ ಉತ್ತಮ ರೀತಿಯಲ್ಲಿ ವೇದಿಕೆ, ವ್ಯವಸ್ಥೆ ಕಲ್ಪಿಸಬೇಕು.

ಬಿಗಿ ಪೊಲೀಸ್ ಬಂದೋಬಸ್ತ್ ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ವ್ಯವಸ್ಥೆ ಮಾಡಬೇಕು ಎಂದು ಪೋಲಿಸ್ ಅಧಿಕಾರಿಗಳಿಗೆ ಸೂಚಿಸಿದರು.



# ಕನ್ನಡ ನಾಡು ನುಡಿ ರಕ್ಷಣೆ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ:ಅರಕೇರಿ



ಯಡ್ರಾಮಿ:ನ.03:ಕನ್ನಡ ನಾಡು ನುಡಿ ರಕ್ಷಣೆ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದು ಯಡ್ರಾಮಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಸವರಾಜ ಅರಕೇರಿ ಹೇಳಿದರು.

ಪಟ್ಟಣದಲ್ಲಿ ತಾಲೂಕ ಆಡಳಿತದವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಕನ್ನಡ ಭಾಷೆಗೆ ತನ್ನದೇ ಆದ ಹಿರಿಮೆ ಇದೆ.

ಕನ್ನಡ ಭಾಷೆಯಲ್ಲಿ 7 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ ಎಂದು ಯಡ್ರಾಮಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಸವರಾಜ ಅರಕೇರಿ ಹೇಳಿದರು.ಹಲವಾರು ಪ್ರಾಂತ್ಯಗಳಾಗಿ ವಿಂಗಡಿಸಿ ಹೋಗಿದ್ದ ರಾಜ್ಯದಲ್ಲಿ ಎಲ್ಲ ಸಾಮಂತ ರಾಜರನ್ನು ಒಗ್ಗೂಡಿಸುವ ಕಾರ್ಯ ಸ್ವಾತಂತ್ರ್ಯ ಪೂರ್ವದಲ್ಲೇ ನಡೆದರೂ ಅಖಂಡ ಕರ್ನಾಟಕವಾಗಿ ರೂಪುಗೊಂಡು ಕನ್ನಡಾಂಬೆಯನ್ನು ಆರಾಧಿಸುವ ಅವಕಾಶ ನಮ್ಮದಾಗಿದೆ ಎಂದರು.

ತಾಲೂಕು ದಂಡಾಧಿಕಾರಿ ಯಲ್ಲಪ್ಪ ಸುಬೇದಾರ ಭುವನೇಶ್ವರಿ ದೇವಿಯು ಭಾವಚಿತ್ರಕ್ಕೆ ಪೂಜೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸರದಾರ ಶರಣಗೌಡ ಇನಾಮ್ದಾರ್ ವೃತ್ತದಿಂದ ಅಂಬೇಡರ್ ವೃತ್ತದವರೆಗೆ ವಿವಿಧ ಕಲಾತಂಡಗಳು ಹಾಗೂ ಶಾಲೆಯ ವಿದ್ಯಾರ್ಥಿಗಳ ಬೃಹತ್ ಕನ್ನಡ ಬಾವುಟದೊಂದಿಗೆ ಮೆರವಣಿಗೆ ನಡೆಸಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಯಲ್ಲಪ್ಪ ಸುಬೇದಾರ, ತಾ.ಪಂ.ಕಾ.ನಿ. ಅಧಿಕಾರಿ ಶಂಕರ ರಾಠೊಡ್, ಪ.ಪಂ.ಮುಖ್ಯಾಧಿಕಾರಿ ಶ್ಯಾಮ್ ಭಜಂತ್ರಿ, ಪಿಎಸ್ಐ ವಿಶ್ವನಾಥ ಮುದರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಗಪ್ಪ ಸಜ್ಜನ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಅಧ್ಯಕ್ಷ ಶಿವಕುಮಾರ ಎಸ್. ಡಂಬಳ, ಸಾಹೇಬ್ ಗೌಡ ದೇಸಾಯಿ, ವಿಶ್ವನಾಥ್ ಗೌಡ ಮಾಗಣಗೇರಾ, ಅಘೋರೆಜ್ ಆತನೂರ್, ಸಾಂಬಶಿವ ಹಿರೇಮಠ, ಯಲ್ಲಾಲಿಂಗ ಹರನಾಳ, ಬಸವರಾಜ ಹೂಗಾರ, ಸಿದ್ದು ಹೂಗಾರ ಬಾಲರಾಜ, ಶ್ರೀಧರ, ಸರಕಾರಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಕನ್ನಡಪರ ಸಂಘಟನೆಯ ಸದಸ್ಯರು ಉಪಸ್ಥಿತರಿದ್ದರು.

# ಅರಸು ಮನೆತನ, ಆಡಳಿತಗಾರರಿಂದ ಕನ್ನಡ ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಅಸ್ಮಿತೆಗೆ ಅಮೂಲ್ಯ ಕೊಡುಗೆ: ಸಚಿವ ಎಂ.ಬಿ.ಪಾಟೀಲ್

ವಿಜಯಪುರ,ನ.03: ವಿಶಾಲವಾದ ಕನ್ನಡನಾಡು ಮತ್ತು ನುಡಿಯು ಶತ–ಶತಮಾನಗಳಿಂದ ಹಲವಾರು ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದವರು, ಬಹಮನಿ, ಆದಿಲ್ ಶಾಹಿ,ಬರೀದ್ ಶಾಹಿ ಸಾಮ್ರಾಜ್ಯಗಳ ಸುಲ್ತಾನರು, ಮೈಸೂರಿನ ಒಡೆಯರು, ಹೈದರ್–ಟಿಪ್ಪು ಸುಲ್ತಾನರು ಮತ್ತು ಮರಾಠಾ–ಪೇಶ್ವೆಗಳಂತಹ ಮುಂತಾದ ಮನೆತನಗಳ ಸಾಮ್ರಾಟರು ಮತ್ತು ಆಡಳಿತಗಾರರೂ ಕೂಡ ಕನ್ನಡ ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಅಸ್ಮಿತತೆಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಬೃಹತ್ ಹಾಗೂ ಮಧ್ಯಮ, ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಹೇಳಿದರು.ಶನಿವಾರ ನಗರದ ಡಾ. ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ 70ನೇ ರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕನ್ನಡ ಭಾಷೆಯ ಸಾವತ್ರಿಕತೆಗಾಗಿ, ಮೈಸೂರಿನ ಒಡೆಯರ್ ಅವರ ಬೆಂಬಲ ಹಾಗೂ ದಿವಾನ್ ವಿಶ್ವೇಶ್ವರಯ್ಯನವರ ಸಹಕಾರದೊಂದಿಗೆ 1915 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ಸಾಹಿತ್ಯ ಪರಿಷತ್ತು ನಿರಂತರವಾಗಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸುವ ಮೂಲಕ ಕನ್ನಡ ನಾಡು ಮತ್ತು ನುಡಿಯ ಕುರಿತಾಗಿ ಜನಾಭಿಪ್ರಾಯವನ್ನು ಗಟ್ಟಿಗೊಳಿಸುವ ಕಾರ್ಯವನ್ನು ಆರಂಭಿಸಿತು. 1924 ರಲ್ಲಿ ಕರ್ನಾಟಕ ಏಕೀಕರಣ ಸಮಿತಿಯ ಪ್ರಥಮ ಸಮ್ಮೇಳನವು ಬೆಳಗಾವಿಯಲ್ಲಿ ಜರುಗಿತು.ತದನಂತರ ಬಳ್ಳಾರಿ, ಧಾರವಾಡ, ಹುಕ್ಕೇರಿ, ಸೊಲ್ಲಾಪುರ ಹಾಗೂ ಮುಂಬಯಿಗಳಲ್ಲಿ ಜರುಗಿ, ನವ ಕರ್ನಾಟಕ ರಾಜ್ಯದ ಏಕೀಕರಣದ ಕನಸನ್ನು ನನಸಾಗಿಸಲು ಪಣ ತೊಟ್ಟವು.

ಗದುಗಿನ ಹುಯಿಲಗೋಳ ನಾರಾಯಣರಾಯರವರು ರಚಿಸಿದ "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು" ಎಂಬ ಗೀತೆ ಕನ್ನಡಿಗರಲ್ಲಿ ಏಕತೆಯ ಭಾವನೆಯನ್ನು ಗಟ್ಟಿಗೊಳಿಸಲು ಪ್ರೇರಣೆಯನ್ನು ನೀಡಿ ಕನ್ನಡಿಗರ ಮೈ ಮನಗಳನ್ನು ಹುರುದುಂಬಿಸಿತು ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ, ವಿಶ್ವ ಕರ್ನಾಟಕ ಮತ್ತು ಪ್ರಬುದ್ಧ ಕರ್ನಾಟಕ ಮೊದಲಾದ ಪತ್ರಿಕೆಗಳು ಕರ್ನಾಟಕ ಏಕೀಕರಣ ಚಳುವಳಿಯ ಪ್ರಭಾವದಲ್ಲಿಯೇ ಉದಯೋನ್ಮುಖವಾದವು. ಕರ್ನಾಟಕ ಏಕೀಕರಣ ಸಂಘದ ಪದಾಧಿಕಾರಿಗಳಾದ ಎಸ್.ನಿಜಲಿಂಗಪ್ಪ,ಅಂದಾನಪ್ಪ ದೊಡ್ಡಮೇಟಿ, ಮಂಗಳವೇಡೆ ಶ್ರೀನಿವಾಸರಾಯ ಮತ್ತು ಶಾಂತಪ್ಪ ಯಳಮೇಲಿ ಅವರ ಪರಿಶ್ರಮದಿಂದ ಏಕೀಕರಣ ಚಳುವಳಿಯು ತೀವ್ರವಾದ ರಾಜಕೀಯ ಸ್ವರೂಪವನ್ನು ಪಡೆದುಕೊಂಡ ಪ್ರಯುಕ್ತ, ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಉದಯವಾಯಿತು.



# ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ 9ನೇ ಜನ್ಮದಿನಾಚರಣೆಯಂಗವಾಗಿ ಲಕ್ಷ ಪುಷ್ಪಬಿಲ್ವಾರ್ಚನೆ ಹಾಗೂ ಇಷ್ಟಲಿಂಗ ಪೂಜೆ ನೆರವೇರಿಸಿದ ಭಕ್ತರು

ಕಲಬುರಗಿ;ನ.03 :ಶರಣಬಸವೇಶ್ವರ ದೇವಾಲಯದ ಆವರಣದಲ್ಲಿರುವ ಅನುಭವ ಮಂಟಪದಲ್ಲಿ ಶನಿವಾರ ದಂದು ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಶರಣಬಸವೇಶ್ವರ ಸಂಸ್ಥಾನದ 9ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ 9ನೇ ಜನ್ಮದಿನಾಚರಣೆ ಅಂಗವಾಗಿ, ಶರಣಬಸವೇಶ್ವರ ದೇವಾಲಯದ ಆವರಣದಲ್ಲಿ ಸಾವಿರಾರು ಭಕ್ತರು ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ ಆರೋಗ್ಯ, ಧೀರ್ಘಾಯುಷ್ಯ ಹಾಗೂ ಸುಖ ಶಾಂತಿ, ಸಮೃದ್ಧಿಯ ಜೀವನಕ್ಕಾಗಿ ಶ್ರೀ ಶರಣಬಸವೇಶ್ವರರ ಗದ್ದುಗೆಗೆ "ಲಕ್ಷ ಪುಷ್ಪ ಬಿಲ್ವಾರ್ಚನೆ" ಮಾಡುವ ಮೂಲಕ ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗವಹಿಸಿದ್ದರು.



ಪೂಜ್ಯ ಅಪ್ಪಾಜಿಯವರ ಜನ್ಮದಿನಾಚರಣೆಯ ಅಂಗವಾಗಿ ನಸುಕಿನ ಜಾವದಲ್ಲಿ ಭಕ್ತರು ದೇಗುಲದಲ್ಲಿ ಆಯೋಜಿಸಿರುವ "ಲಕ್ಷ ಪುಷ್ಪ ಬಿಲ್ವಾರ್ಚನೆ"ಯಲ್ಲಿ ಪಾಲ್ಗೊಳ್ಳಲು ಆರಂಭಿಸಿದರು. ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರು ತಮ್ಮ ಸಹೋದರಿಯರಾದ ಕುಮಾರಿ ಭವಾನಿ ಎಸ್. ಅಪ್ಪ, ಕುಮಾರಿ ಶಿವಾನಿ ಎಸ್. ಅಪ್ಪ ಹಾಗೂ ಕುಮಾರಿ ಮಹೇಶ್ವರಿ ಎಸ್. ಅಪ್ಪ ಮತ್ತು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಹಾಗೂ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ ಅವರೊಂದಿಗೆ ಬಿಲ್ವಾರ್ಚನೆಯಲ್ಲಿ ಪಾಲ್ಗೊಂಡು ತದ ನಂತರ ಇಷ್ಟಲಿಂಗ ಪೂಜೆಯಲ್ಲಿ ಪಾಲ್ಗೊಂಡರು. ಪಾಳಾದ ಡಾ.ಗುರುಮೂರ್ತಿ ಶಿವಾಚಾರ್ಯರರ ನೇತೃತ್ವದ ಇಷ್ಟಲಿಂಗ ಪೂಜೆಯಲ್ಲಿ ಅನೇಕ ಭಕ್ತಾದಿಗಳು ಪಾಲ್ಗೊಂಡು, ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ ಆಯುರಾರೋಗ್ಯಕ್ಕೆ ಇಷ್ಟಲಿಂಗ ಪೂಜೆ ಮಾಡಿ ಪ್ರಾರ್ಥಿಸಿದರು.

ಕಲಬುರಗಿಯ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮ ಪ್ರಭು ಪಾಟೀಲ, ಶಾಸಕ ತಿಪ್ಪಣ್ಣಪ್ಪ ಕಮಕನೂರ, ಕಾಂಗ್ರೆಸ್ ಪಕ್ಷದ ಮುಖಂಡ ನೀಲಕಂಠರಾವ ಮೂಲಗೆ, ಮಾಜಿ ಶಾಸಕ ಅಮರನಾಥ ಪಾಟೀಲ ಸೇರಿದಂತೆ ಅನೇಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಹಾಗೂ ಪೂಜ್ಯ ದೊಡ್ಡಪ್ಪ ಅಪ್ಪಾಜಿಯವರ ಆಶೀರ್ವಾದ ಪಡೆದರು.

ವೀರಶೈವ ಲಿಂಗಾಯತ ಮಹಾ ವೇದಿಕೆ ವತಿಯಿಂದ ಸಂತ ಶರಣಬಸವೇಶ್ವರರಿಗೆ ಈ "ಲಕ್ಷ ಪುಷ್ಪ ಬಿಲ್ವಾರ್ಚನೆ" ಕಾರ್ಯಕ್ರಮ ನಡೆಯಿತು. ವೇದಿಕೆಯ ಪದಾಧಿಕಾರಿಗಳು ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ, ಪೂಜ್ಯ ದೊಡ್ಡಪ್ಪ ಅಪ್ಪಾಜಿ ಹಾಗೂ ಶ್ರೀ ಬಸವರಾಜ ದೇಶಮುಖ ಅವರನ್ನು ಸನ್ಮಾನಿಸಿದರು.

ಧಾರ್ಮಿಕ ವಿಧಿವಿಧಾನಗಳಲ್ಲಿ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ, ಕುಲಸಚಿವ ಡಾ. ಎಸ್. ಜಿ. ಡೊಳ್ಳೇಗೌಡರ್, ಕುಲಸಚಿವ (ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ ಹಾಗೂ ಡಾ. ಅಲ್ಲಮಪ್ರಭು ದೇಶಮುಖ, ಕುಮಾರ ದೇಶಮುಖ, ಶ್ರೀಮತಿ ಸ್ನೇಹಾ ದಿನೇಶ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಬಾಲ್ಯದಿಂದಲೇ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು:ಲಕ್ಷ್ಮೀನಾರಾಯಣ ಹೆಬ್ಬಾರ

ಕಲಬುರಗಿ:ನ.03:ವಿಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದ ಇಬ್ಬರು ಅಪ್ರತಿಮ ವ್ಯಕ್ತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ಆಲ್ಫ್ರೆಡ್ ನೊಬೆಲ್ ಅವರ ಜನ್ಮ ವಾರ್ಷಿಕೋತ್ಸವದ ಮಾಸದ ಅಂಗವಾಗಿ ಸರ್ವಜ್ಞ ಪ್ರೌಢ ಶಾಲೆಯಲ್ಲಿ ನಾಡೋಜ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಸಭಾಂಗಣದಲ್ಲಿ "ವಿಜ್ಞಾನದಲ್ಲಿ ಸೃಜನಶೀಲತೆ" ಕುರಿತು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಕಲಬುರಗಿಯ ಮಾಜಿ ಜಿಲ್ಲಾ ವಿಜ್ಞಾನ ಕೇಂದ್ರದ ಅಧಿಕಾರಿ ಮತ್ತು ಶಿಕ್ಷಣಾಧಿಕಾರಿ ಶ್ರೀ ಲಕ್ಷ್ಮಿನಾರಾಯಣ ಹೆಬ್ಬಾರ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ವೈಜ್ಞಾನಿಕ ಪ್ರಗತಿಯ ಪ್ರೇರಕ ಶಕ್ತಿಯಾಗಿ ಸೃಜನಶೀಲತೆಯ ಮಹತ್ವವನ್ನು ಒತ್ತಿ ಹೇಳಿದರು. ವಿಜ್ಞಾನವು ಪಠ್ಯಪುಸ್ತಕಗಳು ಅಥವಾ ಪ್ರಯೋಗಾಲಯಗಳಿಗೆ ಸೀಮಿತವಾಗಿಲ್ಲ, ಆದರೆ ದೈನಂದಿನ ಕುತೂಹಲ, ಪ್ರಶ್ನಿಸುವಿಕೆ ಮತ್ತು ಪರಿಶೋಧನೆಯಲ್ಲಿ ಪ್ರಸ್ತುತವಾಗಿದೆ ಎಂದು ಅವರು ಒತ್ತಿ ಹೇಳಿದರು.

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು. ಅವರು ವಿದ್ಯಾರ್ಥಿಗಳು ಸ್ವತಂತ್ರವಾಗಿ ಗಮನಿಸಲು, ಪ್ರಯೋಗಿಸಲು, ಪ್ರಶ್ನೆಗಳನ್ನು ಕೇಳಲು ಮತ್ತು ಯೋಚಿಸಲು ಪ್ರೋತ್ಸಾಹಿಸಿದರು. ವಿಜ್ಞಾನ ಕಷ್ಟವಲ್ಲ–ವಿಜ್ಞಾನ ಆಸಕ್ತಿದಾಯಕವಾಗಿದೆ. ನೀವು ಮಾಡುವ ಮೂಲಕ ಕಲಿಯುವಾಗ ಅದು ಸಂತೋಷದಾಯಕ ಮತ್ತು ರೋಮಾಂಚಕಾರಿಯಾಗುತ್ತದೆ ಎಂದು ಅವರು ಹೇಳಿದರು. ಮಹಾನ್ ಆವಿಷ್ಕಾರಗಳು ಸಾಮಾನ್ಯವಾಗಿ ಸರಳ ವಿಚಾರಗಳೊಂದಿಗೆ ಪ್ರಾರಂಭವಾಗುತ್ತವೆ ಮತ್ತು ವೈಜ್ಞಾನಿಕ ಅಭಿವೃದ್ಧಿಯಲ್ಲಿ ಕಲ್ಪನೆ ಮತ್ತು ಸೃಜನಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ವಿದ್ಯಾರ್ಥಿಗಳಿಗೆ ನೆನಪಿಸಿದರು. ವೈಜ್ಞಾನಿಕ ನಾವೀನ್ಯತೆ ಮತ್ತು ಪ್ರಗತಿಗೆ ಸೃಜನಶೀಲತೆ ಅತ್ಯಗತ್ಯ, ಬಾಲ್ಯದಿಂದಲೇ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು, ವಿಜ್ಞಾನವು ನಮ್ಮ ಸುತ್ತಲಿನ ಪ್ರಪಂಚವನ್ನು ಯೋಚಿಸುವ, ಪ್ರಶ್ನಿಸುವ ಮತ್ತು ಅರ್ಥಮಾಡಿಕೊಳ್ಳುವ ಒಂದು ಮಾರ್ಗವಾಗಿದೆ, ಪ್ರಾಯೋಗಿಕ ಅನುಭವದ ಮೂಲಕ ವಿಜ್ಞಾನವನ್ನು ಕಲಿಯುವುದು ಅದನ್ನು ಆಕರ್ಷಕವಾಗಿ ಮತ್ತು ಆನಂದದಾಯಕವಾಗಿಸುತ್ತದೆ. ಕುತೂಹಲ, ವೀಕ್ಷಣೆ ಮತ್ತು ಕಲ್ಪನೆಯು ಯುವ ವಿಜ್ಞಾನಿಗಳ ಪ್ರಮುಖ ಗುಣಗಳಾಗಿವೆ ಎಂದು ಹೇಳುತ್ತ ವಿದ್ಯಾರ್ಥಿಗಳಿಗೆ ವಿವಿಧ ಪ್ರಯೋಗಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳಿಗೆ ಸಾಬೀತುಪಡಿಸಿದರು.

ಶಾಲಾ ನಿರ್ದೇಶಕಿ ಶ್ರೀಮತಿ ಸಂಗೀತಾ ಅಭಿಷೇಕ್ ಪಾಟೀಲ ಮತ್ತು ಪ್ರಾಂಶುಪಾಲರಾದ ಶ್ರೀಮತಿ ಅನಿತಾ ಕುಲಕರ್ಣಿ ಯುವ ವಿದ್ಯಾರ್ಥಿಗಳನ್ನು ವೈಜ್ಞಾನಿಕ ಚಿಂತನೆ ಮತ್ತು ಸೃಜನಶೀಲತೆಯತ್ತ ಪ್ರೇರೇಪಿಸಲು ಇಂತಹ ಶೈಕ್ಷಣಿಕ ಮತ್ತು ಸ್ಫೂರ್ತಿದಾಯಕ ಕಾರ್ಯಕ್ರಮಗಳನ್ನು ಆಯೋಜಿಸುವ ಮಹತ್ವದ ಕುರಿತು ಮಾತನಾಡಿದರು. ಅವರು ವಿದ್ಯಾರ್ಥಿಗಳು ವಿಜ್ಞಾನ ಸಂಬಂಧಿತ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಲು ಪ್ರೋತ್ಸಾಹಿಸಿದರು.

ಕಾರ್ಯಕ್ರಮವನ್ನು ಶ್ರೀ ಗುರುರಾಜ ಕುಲಕರ್ಣಿ ಸ್ವಾಗತಿಸಿದರು, ಶ್ರೀಮತಿ ಪವಿತ್ರಾ ನಿರೂಪಿಸಿದರು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು ಮತ್ತು ಸಕ್ರಿಯವಾಗಿ ಸಂವಹನ ನಡೆಸಿದರು, ಕಾರ್ಯಕ್ರಮವನ್ನು ಉತ್ಸಾಹಭರಿತ ಮತ್ತು ಚಿಂತನಶೀಲವಾಗಿಸಿದರು.






# ಉತ್ತರ ಕರ್ನಾಟಕ ಚಳುವಳಿಯ ಹೃದಯಭಾಗ:ಡಾ.ವಿನಯಾ

ತಾಳಿಕೋಟೆ:ನ.03 :ನವ್ವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾ ಸಾಗಿಬರಲಾಗಿದೆ 70ನೇ ವರ್ಷದಲ್ಲಿ ದಾಪುಗಾಲು ಹಾಕಿದ ಇಂದಿನ ಉತ್ಸವದಲ್ಲಿ ವಿವಿಧ ವಾದ್ಯ ವೈಭವಗಳು ವಿವಿಧ ಶಾಲಾ ಕಾಲೇಜುಗಳ ಮಕ್ಕಳು ಕನ್ನಡ ಅಭಿಮಾನದೊಂದಿಗೆ ತಾಳಿಕೋಟೆ ಪಟ್ಟಣದಲ್ಲಿ ನಾಡದೇವಿ ಭುವನೇಶ್ವರಿ ದೇವಿಯ ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಂಡು ಜಯ ಘೋಷಣೆಗಳನ್ನು ಹಾಕುತ್ತಾ ಪ್ರಮುಖ ಬೀದಿಗಳಲ್ಲಿ ಸಾಗಿಬಂದಿರುವದು ಸಂತಸದ ಸಂಗತಿಯಾಗಿದೆ ಎಂದು ತಾಲೂಕಾ ತಹಶಿಲ್ದಾರರಾದ ಡಾ.ವಿನಯಾ ಹೂಗಾರ ಅವರು ಹೇಳಿದರು.

ತಾಲೂಕಾಡಳಿತ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ, ಕನ್ನಡ ಅಭಿಮಾನಿಗಳ ನೇತೃತ್ವದಲ್ಲಿ ಕನ್ನಡ ಶಾಲಾ ಮೈಧಾನದಲ್ಲಿ ಏರ್ಪಡಿಸಲಾದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಕನ್ನಡ ಧ್ವಜಾರೋಹಣ ನೇರವೇರಿಸಿ ಮಾತನಾಡುತ್ತಿದ್ದ ಅವರು ಕನ್ನಡ ನಾಡಿನ ವೈಭವ ಕುರಿತು ಎಷ್ಟು ಹೊಗಳಿದರೂ



ಸಾಲದು ಕರ್ನಾಟಕದ ಇತಿಹಾಸವನ್ನು ಓದಿ ಅರಿತುಕೊಳ್ಳಬೇಕಾಗಿದೆ ಐತಿಹಾಸಿಕವಾಗಿ ಬೆಳೆಯುತ್ತಿರುವ ತಾಳಿಕೋಟೆ ನಗರವಾಗಿದೆ

ಈ ತಾಲೂಕಿನಲ್ಲಿ ಕನ್ನಡ ಕಂಪು ಎಂಬುದು ಹಚ್ಚು ಹಸಿರಾಗಿದೆ ಕನ್ನಡದ ಅಕ್ಷರದ ಜೊತೆಗೆ ಅಂಕಿ ಸಂಖ್ಯೆಗಳನ್ನು ಉಪಯೋಗಿಸುತ್ತಿರುವದು ತಾಳಿಕೋಟೆ ನಗರದಲ್ಲಿ ಕಾಣಬಹುದಾಗಿದೆ ಅಂತಹ ಅಪ್ಪಟ ಕನ್ನಡಿಗರನ್ನು ಗುರುತಿಸಿ ಗೌರವಿಸುವಂತಹ ಕಾರ್ಯ ತಾಲೂಕಾಡಳಿತವು ಮಾಡುತ್ತಿದೆ ಎಂದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈಭೀಮ ಮುತ್ತಗಿ ಮಾತನಾಡಿ ಇತ್ತೀಚಗೆ ನಿಧನರಾದ ಚಿತ್ರನಟ ರಾಜು ತಾಳಿಕೋಟೆ ಅವರ ನಿಧನ ಕುರಿತು ಸಂತಾಪ ಸೂಚಿಸಿ ಅವರ ಇತಿಹಾಸ ವಿವರಿಸಿದ ಅವರು ಶ್ರೀ ಖಾಸ್ಗತೇಶ್ವರರ ಆಶಿರ್ವಾದದಿಂದ ನುಡಿ ನಮನದೊಂದಿಗೆ ನಾಟಕವೊಂದನ್ನು ಸೃಷ್ಠಿಸಿ ಖಾಸ್ಗತೇಶ್ವರರ ಹೆಸರು ಬೆಳೆಸುತ್ತಾ ತಮ್ಮ ಅಪಾರ ಪ್ರತಿಭೆ ಬೆಳೆಸಿಕೊಂಡ ರಾಜು ಅವರು ನಾಟ್ಯಗಳ ಮುಖಾಂತರ ಸಂಸ್ಕೃತಿಕ ಕಾರ್ಯಕ್ರಮಗಳಾಗಲಿ ಅನೇಕ ಆದ್ಯಾತ್ಮೀಕ ವಿಚಾರ ಬರುವ ನಾಟಕಗಳನ್ನು ಮಾಡುತ್ತಾ ಸಾಗಿದ್ದರು ಅವರಲ್ಲಿ ಜಾತಿ ಮತ ಪಂಥ ಬೇದವೆಂಬವುಗಳು ಇರಲಿಲ್ಲಾವೆಂದ ಅವರು ರಾಜು ಅವರು ಅನ್ಯಕೋಮಿನವರೊಂದಿಗೆ ಇಟ್ಟುಕೊಂಡ ಒಡನಾಟವನ್ನು ವಿವರಿಸಿ ಶ್ರೀ ಖಾಸ್ಗತರ ಮೇಲೆ ಭಕ್ತಿ ಹೇಗಿತ್ತೆಂಬುದರ ಕುರಿತು ಮಾರ್ಮಿಕವಾಗಿ ವಿವರಿಸಿದರು.

ಇನ್ನೋರ್ವ ಉಪನ್ಯಾಸಕರಾಗಿ ಆಗಮಿಸಿದ ಎಸ್.ಕೆ.ಹೈಸ್ಕೂಲ್ ಉಪನ್ಯಾಸಕ ಡಾ.ಎ.ಬಿ.ಇರಾಜ ಅವರು ರಾಜ್ಯೋತ್ಸವ ಕುರಿತು ಉಪನ್ಯಾಸ ನೀಡಿ ಜನಪದ ಕಲಾ ತಂಡಗಳೊಂದಿಗೆ ಅದ್ಭುತ್ ಕಾರ್ಯಕ್ರಮವನ್ನು ತಾಲೂಕಾಡಳಿತವತಿಯಿಂದ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಏಕೀಕರಣ ಚಳುವಳಿ ಕುರಿತು ವಿವರಿಸಿದ ಅವರು ಕರ್ನಾಟಕದ ನೆಲ ನಾಲ್ಕು ಭಾಗಗಳಾಗಿ ಒಳಗೊಂಡಿತ್ತು ಕಾವೇರಿಯಿಂದ ಗೋದಾವರಿ ವರೆಗೆ ಇತಿಹಾಸ ಪರಂಪರೆ ಹೊಂದಿದ ಈ ನಾಡು ನಾಟ್ಯ ಪರಂಪರೆ ವಚನ ಸಾಹಿತ್ಯ ಶಿಲ್ಪ ಕಲೆ ವಾಸ್ತು ಕಲೆಯೊಂದಿಗೆ ತನ್ನ ಪರಂಪರೆಯನ್ನು ಉಳಿಸಿಕೊಂಡು ಬಂದಂತಹ ನಾಡು ನಮ್ಮ ಕರ್ನಾಟಕವಾಗಿದೆ ಸ್ವಾತಂತ್ರ್ಯ ಚಳುವಳಿಯು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಮಹಾತ್ಮರನ್ನು ನೆನಪಿಸಿಕೊಂಡರು.

# ಸಂಗನಬಸವ ಶಿಶುನಿಕೇತನ ಶಾಲೆಯಲ್ಲಿ 70ನೇ ಕನ್ನಡ ರಾಜ್ಯೋತ್ಸವ

ವಿಜಯಪುರ,ನ.03: ನಗರದ ಶ್ರೀ ಸಿದ್ದೇಶ್ವರ ಸಂಸ್ಥೆಯ ಅಧೀನದಲ್ಲಿ ನಡೆಯುವ ಸಂಗನಬಸವ ಶಿಶುನಿಕೇತನ ಶಾಲೆಯಲ್ಲಿ 69 ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು ಶ್ರೀ ಸಿದ್ದೇಶ್ವರ ಸಂಸ್ಥೆಯ ಚೇರ್ಮನ್ ರಾದ ಶ್ರೀ ಬಸಯ್ಯ ಹಿರೇಮಠ ಹಾಗೂ ಶಾಲೆಯ ನಾಮಿನಿ ಚೇಮರ್ನ್ ರಾದ ಶ್ರೀ ಎಸ್ ಎಚ್ ನಾಡಗೌಡ ರವರು ಹಾಗೂ ಸಂಸ್ಥೆಯ ಆಡಳಿತಾದಿಕಾರಿಗಳು ಹಾಗೂ ಶಾಲೆಯ ಪ್ರಾಂಶುಪಾಲರಾದ ಶ್ರೀ ವಿಜಯಲಕ್ಷ್ಮೀ ರಾ ಪಟ್ಟೇದ ಅವರು ಹಾಗೂ ಉಪ ಪ್ರಾಚಾಯರ್ರು ಉಪ ಪ್ರಾಂಶುಪಾಲರು ನಾಡದೇವಿ ಭುವನೇಶ್ವರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಸಿದ್ದೇಶ್ವರ ಸಂಸ್ಥೆಯ ಚೇರ್ಮನ್ ಬಸಯ್ಯ ಹಿರೇಮಠ ಅವರು ಮಾತನಾಡಿ, ಎರಡು ಸಾವಿರ ಇತಿಹಾಸವಿರುವ ಕನ್ನಡ ಭಾಷೆಯು ನಮ್ಮ ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದೆ. ಕನ್ನಡ ನಮ್ಮ ಹೃದಯ ಭಾಷೆ ಅದನ್ನು ಗೌರವಿಸೋಣ ಎಂದು ಹೇಳಿದರು.

ಶಾಲೆಯ ನಾಮಿನಿ ಚೇರ್ಮನ್ ಎಸ್.ಎಚ್. ನಾಡಗೌಡ ಅವರು ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲವಾದ ಕನ್ನಡ ನಾಡು ಅದನ್ನು ಒಂದುಗೂಡಿಸಲು ಹೋರಾಡಿದ ನಮ್ಮ ಹಿರಿಯರನ್ನು ನೆನೆಯುತ್ತ ನಮ್ಮ ಮಾತೃ ಭಾಷೆಯನ್ನು ಉಳಿಸಿ ಬೆಳೆಸೋಣವೆಂದು ಹೇಳಿದರು.

ಶಾಲೆಯ ಪ್ರಾಚಾರ್ಯೆ ವಿಜಯಲಕ್ಷ್ಮೀ ಪಟ್ಟೇದ ಅವರು ಮಾತನಾಡಿ, ತನು ಕನ್ನಡ,ನುಡಿ ಕನ್ನಡ, ಮನ ಕನ್ನಡ ಕನ್ನಡ ನಮ್ಮ ಉಸಿರಾಗಿರಲಿ ಅದನ್ನು ಎಲ್ಲರೂ ಉಳಿಸಿ ಬೆಳೆಸೋಣವೆಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಚೇರ್ಮನ್ ನ್ನರು ,ಶಾಲೆಯ ನಾಮಿನಿ ಚೇಮರ್ನ್‌ನ್ನರು,

ಸಂಸ್ಥೆಯ ಆಡಳಿತಾದಿಕಾರಿಗಳು, ಶಾಲೆಯ ಪ್ರಾಚಾರ್ಯರು, ಉಪ ಪ್ರಾಚಾರ್ಯರು, ಹಾಗೂ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಮಾತೃಭಾಷೆಯಲ್ಲಿಯ ಶಿಕ್ಷಣ ಬಹಳ ಮುಖ್ಯ: ಸ್ವಾಮಿರಾವ ಕುಲಕರ್ಣಿ

ಕಲಬುರಗಿ,ನ.03: ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದ ಅಭಿವೃದ್ಧಿಯಾಗುವುದು ಆತನ ಮಾತೃಭಾಷೆ, ಮತೃಭೂಮಿಯ ಸಂಸ್ಕೃತಿ, ಆಚಾರ ವಿಚಾರಗಳಿಂದ. ಆದ್ದರಿಂದ ಮಾತೃಭಾಷೆಯಲ್ಲಿಯ ಶಿಕ್ಷಣ ಬಹಳ ಮುಖ್ಯವೆಂದು ಹಿರಿಯ ಸಾಹಿತಿ, ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಪ್ರೊ.ಸ್ವಾಮಿರಾವ ಕುಲಕರ್ಣಿ ಅವರು ಹೇಳಿದರು. ಅವರು ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಮುಖ್ಯ ಅಥಿತಿಗಳಾಗಿ ಮಾತನಾಡಿದರು.

ಅವರು ಮುಂದುವರೆದು ಮಾತನಾಡಿ ನಮ್ಮ ಸರ್ವೋಚ್ಛ ನ್ಯಾಯಾಲಯವು ಶಿಕ್ಷಣದ ಮಾದ್ಯಮವನ್ನು ಆಯ್ಕೆಮಾಡಿಕೊಳ್ಳುವ ಹಕ್ಕು ವಿದ್ಯಾರ್ಥಿ ಮತ್ತು ಆತನ ಪಾಲಕರಿಗಿದೆ ಎಂದು ಹೇಳಿದೆ. ಕಾನೂನಿನ ಮೂಲಕ ಒಂದು ಭಾಷೆಯನ್ನು ಬೆಳೆಸುವ ಹಾಗು ಉಳಿಸುವ ಪ್ರಯತ್ನ ಸೀಮಿತವಾದದ್ದು. ಬದಲಿಗೆ ಭಾಷೆಯನ್ನು ಬಳಸುವ ಮೂಲಕ ಉಳಿಸುವ ಕಾರ್ಯವನ್ನು ಸ್ವತಃ ಕನ್ನಡಿಗರು ಮಾಡಬೇಕು. ಅದಕ್ಕೆ



ಮಾನಸಿಕ ಪರಿವರ್ತನೆ ಹಾಗು ಮನೋಭಾವದಲ್ಲಿನ ಪರಿವರ್ತನೆ ಅವಶ್ಯಕ. ತಮಿಳಿಗರ ಭಾಷಾ ಪ್ರತಿಯಿಂದ ನಾವು ನೋಡಿ ಕಲಿಯಬೇಕು. ಭಾಷೆಗೆ ಗಂಡಾಂತರವಿರುವುದು ಅನ್ಯ ಭಾಷಿಕರಿಂದ ಅಲ್ಲ ಬದಲಿಗೆ ಅವಿವೇಕಿ ವಿದ್ಯಾವಂತರಿಂದ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಭಾರ ಕುಲಸಚಿವ ಪ್ರೊ.ಚೆನ್ನವೀರ ಆರ್ ಎಂ. ಅವರು ಮಾತನಾಡಿ ನಮ್ಮ ಸಾಂಪ್ರದಾಯಿಕ ಗ್ರಾಮೀಣ ಸೊಗಡಿನ ಹಳೆಯ ಕನ್ನಡ ಮಾಯವಾಗುತ್ತಿದೆ. ಹಳ್ಳಿಗಳಲ್ಲಿ ಅಲ್ಪಸ್ವಲ್ಪ ಉಳಿದಿದ್ದು ಅನೇಕ ಹಳೆಯ ಕನ್ನಡ ಪದಗಳು ಮಾಯಾವಾಗುತ್ತಿವೆ.

ಇಂದು ನಾವು ಕೃತಕ ಬುದ್ದಿಮತ್ತೆ ಯುಗದಲ್ಲಿ ಯಂತ್ರಗಳಿಗೆ ಭಾಷೆಯನ್ನು ಕಲಿಸುತ್ತಿದ್ದೇವೆ ಹಾಗು ಅವುಗಳೊಂದಿಗೆ ಸಂವಹನ ಮಾಡುತ್ತಿದ್ದೇವೆ. ಮನುಷ್ಯರ ಜೊತೆಗೆ ಯಂತ್ರಗಳೊಂದಿಗೂ ಹೊಂದಿಕೊಂಡು ಹೋಗಬೇಕಾದ ಅವಶ್ಯಕತೆಯಿದೆ. ನಾವು ಭಾಷೆಯ ವಿಷಯದಲ್ಲಿ ಬಹಳ ಉದಾರವಾದಿಗಳಾಗಿದ್ದೇವೆ ಹಾಗು ಇಂದಿನ ಅಗತ್ಯತೆಯಿಂದಾಗಿ ಬಹುಭಾಷಿಕರಾಗಿದ್ದೇವೆ ಅಲ್ಲದೆ ಇಂಗ್ಲೀಷ ಮೇಲಿನ ವ್ಯಾಮೋಹ ಬಹಳ ಹೆಚ್ಚಾಗಿದೆ ಎಂದು ಹೇಳಿದರು.

ಪ್ರೊ.ವೀರೇಶ ಕಸಬೆಗೌಡರ ಅತಿಥಿಗಳಾಗಿ ಪಾಲ್ಗೊಂಡರು.ಕಾರ್ಯಕ್ರಮದ ಸಂಯೋಜಕ ಡಾ. ಗಣಪತಿ ಬಿ ಸಿನ್ನೂರ ಅವರು ಎಲ್ಲರನ್ನೂ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಡಾ. ಪ್ರಕಾಶ ಬಾಳಿಕಾಯಿ ಕಾರ್ಯಕ್ರಮ ನಿರೂಪಿಸಿ ಎಲ್ಲರನ್ನೂ ವಂದಿಸಿದರು. ಡಾ. ಜಯದೇವಿ ಜಂಗಮಶೆಟ್ಟಿ, ಡಾ. ರವಿಕಿರಣ ನಾಕೋಡ, ಡಾ. ಸ್ವಪನಿಲ್ ಚಾಪೇಕರ ಅವರು ರಾಷ್ಟ್ರಗೀತೆ, ನಾಡಗೀತೆ ಹಾಗು ಕನ್ನಡ ಗೀತೆಗಳನ್ನು ಹಾಡಿದರು. ಇದಕ್ಕೂ ಮುನ್ನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಭಾರ ಕುಲಸಚಿವ ಪ್ರೊ.ಚೆನ್ನವೀರ ಆರ್ ಎಂ. ಅವರು ಕನ್ನಡಾಂಭೆ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪೂಜೆನೇರವೇರಿಸಿ ಧ್ವಜಾರೋಹಣ ಮಾಡಿದರು.

ಈ ಸಂದರ್ಭದಲ್ಲಿ ಪ್ರೊ.ಶಿವಗಂಗಾ ರುಮ್ಮಾ, ಪ್ರೊ.ವಿಕ್ರಮ ವಿಸಾಜಿ, ಪ್ರೊ.ಬಸವರಾಜ ಕೊಡಗುಂಟಿ, ಪ್ರೊ.ರಾಜಣ್ಣ ತಗ್ಗಿ, ಪ್ರೊ.ಎಂ. ಎಸ್ ಪಾಸೋಡಿ, ವಿತ್ತಾಧಿಕಾರಿ ಶ್ರೀ. ರಾಮಾ ದೊರ್ಯೆ, ಡಾ. ಪಿ. ಎಸ್. ಕಟ್ಟಿಮನಿ, ಡಾ. ವಿಜಯಕುಮಾರ, ಪ್ರೊ.ಪಾಂಡುರಂಗ ಪತ್ತಿ ಉಪಸ್ಥಿತರಿದ್ದರು.

# ಸೋಲು ಗೆಲುವು ಮುಖ್ಯವಲ್ಲ, ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ:ಬಿರಾದಾರ

ಚಿತ್ತಾಪುರ;ನ.03:ಸೋಲು ಗೆಲುವು ಮುಖ್ಯವಲ್ಲ, ಯಾವುದೇ ಕ್ರೀಡೆಗಳಿರಲಿ ಅದರಲ್ಲಿ ಭಾಗವಹಿಸುವುದು ಬಹಳ ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಬಿರಾದಾರ ಹೇಳಿದರು.

ಪಟ್ಟಣದ ಶ್ರೀಮತಿ ಮಹಾದೇವಮ್ಮ ಬಿ.ಪಾಟೀಲ ಸಿಬಿಎಸ್‌ಇ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 14 ಮತ್ತು 17 ವರ್ಷದೊಳಗಿನ ಮಕ್ಕಳಿಗೆ ಆಯೋಜಿಸಿದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಸಾಮರ್ಥ್ಯ ಹೆಚ್ಚಳ ಹಾಗೂ ಬೌದ್ಧಿಕ ಮಟ್ಟ ವೃದ್ಧಿ ಆಗುತ್ತದೆ ಎಂದರು.

ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಓದುವುದರ ಜೊತೆ ಜೊತೆಗೆ, ಕ್ರೀಡೆಗಳಲ್ಲಿಯೂ ಭಾಗವಹಿಸಿವುದರ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಾಗರೆಡ್ಡಿ ಪಾಟೀಲ ಕರದಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಕ್ರೀಡೆಗಳಿಂದ ಆರೋಗ್ಯ ಸುಧಾರಿಸುತ್ತದೆ. ಕ್ರೀಡೆಯಿಂದ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಸಾಧ್ಯ ಎಂದರು. ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಹಾಗೂ ಅವರಲ್ಲಿ ಕ್ರೀಡಾಸಕ್ತಿ ಬೆಳೆಸುವ ಉದ್ದೇಶದಿಂದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಹೇಳಿದರು.

14 ವರ್ಷದ ಬಾಲಕರ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ವಾಸವದತ್ತಾ ವಿದ್ಯಾವಿಹಾರ ಸೇಡಂ ಶಾಲೆ ಮಕ್ಕಳು ಪಡೆದುಕೊಂಡರು. ದ್ವಿತೀಯ ಸ್ಥಾನವನ್ನು ಡಿ.ಎ.ವಿ. ವಾಡಿ ಶಾಲೆಯ ಮಕ್ಕಳು ಅಲಂಕರಿಸಿದರು. ಅದೇ ರೀತಿ 14 ವರ್ಷದ ಬಾಲಕಿಯರ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ವಿಕಟ್ ಸಾಗರ್ ವಿದ್ಯಾಮಂದಿರ ಛತ್ರಶಾಲಾ ಮಕ್ಕಳು ಪಡೆದುಕೊಂಡರು ಹಾಗೂ ದ್ವಿತೀಯ ಸ್ಥಾನವನ್ನು ಶ್ರೀಮತಿ ಮಹಾದೇವಮ್ಮಾ ಬಿ. ಪಾಟೀಲ ಚಿತ್ತಾಪುರ ಇವರು ಪಡೆದುಕೊಂಡರು.

17 ವರ್ಷದ ಬಾಲಕರ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ಶ್ರೀಮತಿ ಮಹಾದೇವಮ್ಮ ಬಿ. ಪಾಟೀಲ ಸಿ.ಬಿ.ಎಸ್.ಇ. ಶಾಲೆ ಚಿತ್ತಾಪುರ ಪಡೆದುಕೊಂಡರು. ದ್ವಿತೀಯ ಸ್ಥಾನ ವಾಡಿ ಡಿ.ಎ.ವಿ. ಪಬ್ಲಿಕ್ ಸ್ಕೂಲ್ ಪಡೆದುಕೊಂಡರು. ಅದೇ ರೀತಿ 17 ವರ್ಷದ ಬಾಲಕಿಯರ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ಶ್ರೀಮತಿ ಮಹಾದೇವಮ್ಮ ಬಿ. ಪಾಟೀಲ ಸಿ.ಬಿ.ಎಸ್.ಇ. ಶಾಲೆ ಚಿತ್ತಾಪುರ ಪಡೆದುಕೊಂಡರು. ದ್ವಿತೀಯ ಸ್ಥಾನ ಮಳಖೇಡ ಆದಿತ್ಯ ಬಿರ್ಲಾ ಶಾಲೆ ಪಡೆದುಕೊಂಡಿತ್ತು.ಸ್ಪರ್ಧೆಯ ಎಲ್ಲಾ ವಿಜೇತ ಮಕ್ಕಳಿಗೆ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ಪತ್ರ ಮತ್ತು ಪಾರಿತೋಷಕವಾದ ಕಪ್ ನ್ನು ವಿತರಿಸಿ ಅದೇ ರೀತಿ ಎಲ್ಲಾ ಸ್ಪರ್ಧಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿದರು.

ಪಂದ್ಯಾವಳಿಯಲ್ಲಿ ಆರ್ಯನ್ ಸಿಬಿಎಸ್‌ಇ ಪಬ್ಲಿಕ್ ಸ್ಕೂಲ್ ಕಲಬುರಗಿ, ವೇಧಾ ಪಬ್ಲಿಕ್ ಸ್ಕೂಲ್ ಕಲಬುರಗಿ, ಶ್ಲೋಕಾ ಬಿರ್ಲಾ ಪಬ್ಲಿಕ್ ಸ್ಕೂಲ್ ಕಲಬುರಗಿ, ವಿಕೆಟ್ ಸಾಗರ್ ವಿದ್ಯಾಮಂದಿರ ಛತ್ರಶಾಲಾ, ಓರಿಯಂಟ್ ಡಿಎವಿ ಜ್ಞಾನ ಮಂದಿರ ದಿಗ್ಗಾಂವ, ಡಿಎವಿ ಸ್ಕೂಲ್ ವಾಡಿ, ವಿದ್ಯಾಮಂದಿರ ಸಿಬಿಎಸ್‌ಇ ಸ್ಕೂಲ್ ಸೇಡಂ, ವಾಸವದತ್ತಾ ವಿದ್ಯಾವಿಹಾರ ಸಿಬಿಎಸ್‌ಇ ಸ್ಕೂಲ್ ಸೇಡಂ, ಆದಿತ್ಯ ಬಿರ್ಲಾ ಮಳಖೇಡ, ಶ್ರೀಮತಿ ಮಹಾದೇವಮ್ಮಾ ಬಿ. ಪಾಟೀಲ ಸಿ.ಬಿ.ಎಸ್.ಇ ಶಾಲೆ ಚಿತ್ತಾಪುರ ಶಾಲೆಗಳು ಭಾಗವಹಿಸಿದ್ದವು. ಸದರಿ ಕಾರ್ಯಕ್ರಮದಲ್ಲಿ ಎಲ್ಲಾ ಒಂಭತ್ತು ಶಾಲೆಯ ದೈಹಿಕ ಶಿಕ್ಷಕರು ಭಾಗಿಯಾಗಿದ್ದರು.












# ಆಯುರ್ವೇದ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ: ಎರಡು ವಿನೂತನ ಯೋಜನೆಗಳಿಗೆ ಚಾಲನೆ



ವಿಜಯಪುರ,ನ.03: ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಎ. ವಿ. ಎಸ್. ಆಯುರ್ವೇದ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಎರಡು ವಿನೂತನ ಯೋಜನೆಗಳಿಗೆ ಚಾಲನೆ ನೀಡಲಾಯಿತು.

ಶನಿವಾರ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಅವರು ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಬಳಿಕ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಲೇಜಿನ ಮಹಿಳಾ ಸಬಲೀಕರಣ ಘಟಕದ ವತಿಯಿಂದ ಸಾಕ್ಷರತಾ ಸಬಲಾ ಮತ್ತು ಸ್ವಾವಲಂಬಿ ಸಬಲಾ ಯೋಜನೆಗಳಡಿ ಕಾಲೇಜಿನ ಡ ಗ್ರುಪ್ ಮಹಿಳೆಯರಿಗೆ ನಾನಾ ತರಬೇತಿಯನ್ನು ನೀಡಿ ಅವರನ್ನು ಸಬಲರನ್ನಾಗಿ ಮಾಡಲಾಗುವುದು. ಅಲ್ಲದೇ, ಎಲ್ಲ ಮಹಿಳಾ ಸಿಬ್ಬಂದಿಗೆ ಈಗಿನ ವೃತ್ತಿಯ ಜೊತೆಗೆ ರುಡಶಡ್ ಸಂಸ್ಥೆ ಮೂಲಕ ಕರಕುಶಲ ತರಬೇತಿ ನೀಡಿ ಮಹಿಳಾ ನೌಕರರು ಆರ್ಥಿಕವಾಗಿ ಮತ್ತಷ್ಟು ಸಬಲರನ್ನಾಗಿ ಮಾಡಲಾಗುವುದು. ಅಲ್ಲದೇ, ಕಾಲೇಜಿನಲ್ಲಿ ರೋಗಿಗಳೊಂದಿಗೆ ಉತ್ತಮ ಸಂವಹನ ಹೊಂದಲು ಕಾಲೇಜಿನಲ್ಲಿ ಓದುತ್ತಿರುವ ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಲು ಕೂಡ ಯೋಜನೆ ರೂಪಿಸಲಾಗಿದೆ.ಮುಂಬರುವ ದಿನಗಳಲ್ಲಿ ನಮ್ಮ ನಡೆ ಆಯುರ್ವೇದದ ಕಡೆ ಕಾರ್ಯಕ್ರಮ ನಡೆಸಲಾಗುವುದು ಎಂದು ಅವರು ತಿಳಿಸಿದರು.ಈ ಸಂದರ್ಭದಲ್ಲಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ, ಉಪಪ್ರಾಚಾರ್ಯ ಡಾ. ಶಶಿಧರ ನಾಯಕ, ಹಿರಿಯ ಪ್ರಧ್ಯಾಪಕ ಡಾ.ದರ್ಶನ ಧರಿ, ಡಾ.ಕೆ.ಎ.ಪಾಟೀಲ, ಡಾ.ಉಮಾ ಪಾಟೀಲ,ಡಾ. ಸತೀಶ ಪಾಟೀಲ. ಸಬಲಾ ಘಟಕದ ಪದಾಧಿಕಾರಿಗಳಾದ ಡಾ. ವಿಜಯಲಕ್ಷ್ಮಿ ಬೆನಕಟ್ಟಿ, ಡಾ. ಅಶ್ವಿನಿ ನಿಂಬಾಳ,ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸ್ನಾತಕೋತ್ತರ ವಿದ್ಯಾರ್ಥಿನಿ ಡಾ.ಭೂಮಿಕಾ ನಿರೂಪಿಸಿದರು.

# ಸರ್ವಜ್ಞ,ಜಸ್ಟಿಸ್ ಶಿವರಾಜ ಪಾಟೀಲ ಪಿಯು ಕಾಲೇಜಿನಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ

ಕಲಬುರಗಿ,ನ.03:ನಗರದ ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಪದವಿ ಪೂರ್ವ ವಿಜ್ಞಾನ ಮಹಾ ವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಇದೇ ಸಂದರ್ಭ ದಲ್ಲಿ ಕನ್ನಡ ಉಪನ್ಯಾಸಕರಿಗೆ , 10ನೇ ತರಗತಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು.

ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದ ಸಂಸ್ಥೆಯ ಸಂಸ್ಥಾಪಕರಾದ ಪ್ರೊ. ಚನ್ನಾರೆಡ್ಡಿ ಪಾಟೀಲ ಅವರು ಮಾತನಾಡುತ್ತ ಕವಿ ಕುವೆಂಪು ಅವರ ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ, ಸತ್ತಂತಿಹರನು ಬಡಿದೆಚ್ಚರಿಸು ಕಚ್ಚಾಡುವವರನು ಕೂಡಿಸಿ ಒಲಿಸು ಎಂಬ ಕವಿವಾಣಿಯಂತೆ ಎಲ್ಲರೂ ಜಾತಿಭೇದ ಪಂಥ ಮರೆತು ಪ್ರೀತಿ, ಸ್ನೇಹದಿಂದ ಬಾಳುತ್ತ ಮುಂದಿನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು. ಕರ್ನಾಟಕದ ಏಕೀಕರಣಕ್ಕಾಗಿ ಅನೇಕ ಮಹನೀಯರು ಶ್ರಮಿಸಿದ್ದಾರೆ. ಮಕ್ಕಳು ಕನ್ನಡ ನಾಡು ಭಾಷೆಯ ಬಗ್ಗೆ ಅಭಿಮಾನ ಹೊಂದುವುದರೊಂದಿಗೆ ಉತ್ಸಾಹದಿಂದ ಸಾಧನೆ ಮಾಡಲೇಬೇಕೆಂಬ ಛಲ ಹೊಂದಿದ್ದು ಆ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ದೇಶದ ಉತ್ತಮ ನಾಗರಿಕನಾಗಿ ಹೊರಹೊಮ್ಮಬೇಕೆಂದು ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಪ್ರಶಾಂತ ಕುಲಕರ್ಣಿ, ವಿನುತಾ ಆರ್. ಬಿ., ಪ್ರಭುಗೌಡ ಸಿದ್ಧಾರೆಡ್ಡಿ, ಕರುಣೇಶ ಹಿರೇಮಠ, ಗುರುರಾಜ ಕುಲಕರ್ಣಿ, ಉಪನ್ಯಾಸಕರು,ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನರಂಜಿಸಿದವು.



# ಕನ್ನಡ ಕಲಿಯುವುದು ಚೆಂದ : ಪ್ರೊ.ಶಶಿಕಾಂತ ಎಸ್ ಉಡಿಕೇರಿ



ಕಲಬುರಗಿ:ನ.03:ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತರು ಸರಿಯಾಗಿ ಪೋಷಣೆ ಪಾಲನೆ ಮಾಡುತ್ತಿಲ್ಲ. ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಕಲಿಯುವುದೆ ಆನಂದದಾಯಕ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಶಿಕಾಂತ ಎಸ್ ಉಡಿಕೇರಿ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಮುಂಭಾಗದಲ್ಲಿ 70ನೇ ಕನ್ನಡ ರಾಜ್ಯೋತ್ಸವದ ನಿಮಿತ್ತ ಕನ್ನಡ ಧ್ವಜಾರೋಹಣ ನೆರವೇರಿಸಿ ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಕನ್ನಡ ಶ್ರೇಷ್ಠ ಬಾಷೆ. ಒಂದು ಭಾಷೆ ವಿಶೇಷ ಸ್ಥಾನ ಹೊಂದಬೇಕೆಂದರೆ ದೊಡ್ಡ ಇತಿಹಾಸವಿರಬೇಕು. ಅದನ್ನ ಕನ್ನಡ ಭಾಷೆ ಹೊಂದಿದೆ. ಹಳೆಗನ್ನಡ ಓದುವುದನ್ನ, ಛಂದಸ್ಸುಗಳನ್ನು ಮರೆತಿದ್ದೇವೆ ಎಂದರು. ನನಗೆ ಹಲವಾರು ಕನ್ನಡ ಶಿಕ್ಷಕರು ಕನ್ನಡ ಕಲಿಸಿದ್ದಾರೆ. ನಾನು ಕನ್ನಡ ಕಲಿತಿರುವುದು ಹೆಮ್ಮೆ ಎನಿಸಿದೆ ಎಂದರು.

ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ಹೆಚ್.ಟಿ. ಪೋತೆ ಮಾತನಾಡಿ, 2500 ವರ್ಷಗಳಿಗಿಂತ ಹಳೆಯ ಭಾಷೆ ಕನ್ನಡ. ಇದು ದ್ರಾವಿಡ ಭಾಷೆಗಳಲ್ಲಿ ಒಂದು. ಕನ್ನಡ ಭಾಷೆ ಎನ್ನುವುದು ಬದುಕು ಸಂಸ್ಕೃತಿಯಾಗಿದೆ.

ಅಶೋಕನ ಆಳ್ವಿಕೆ ಅವಧಿಯ ಶಾಸನಗಳಲ್ಲಿ ಕನ್ನಡ ಭಾಷೆ ಕಾಣಬಹುದು ಮತ್ತು 1ನೇ ಶತಮಾನದ ಗ್ರೀಕ್ ನಾಟಕದಲ್ಲಿ ಕನ್ನಡ ಪದಗಳು ಕಂಡು ಬಂದಿವೆ ಆದ್ದರಿಂದ ಕನ್ನಡದ ಹಿರಿತನ ಹಳೆತನವನ್ನ ಅರ್ಥ ಮಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಕುಲಸಚಿವ ಪ್ರೊ. ರಮೇಶ್ ಲಂಡನಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೌಲ್ಯಮಾಪನ ಕುಲಸಚಿವ ಡಾ. ಎನ್. ಜಿ. ಕಣ್ಣೂರು, ವಿತ್ತಾಧಿಕಾರಿ ಶ್ರೀಮತಿ. ಜಯಂಬಿಕಾ, ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಅತಿಥಿ ಅಧ್ಯಾಪಕರು, ಶಿಕ್ಷಕೇತರ ಸಿಬ್ಬಂದಿ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಗೀತ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿ ತಂಡ ಕನ್ನಡಪರ ಗೀತೆ ಪ್ರಸ್ತುತ ಪಡಿಸಿದರು. ದೈಹಿಕ ಶಿಕ್ಷಣ ವಿಭಾಗದ ಪ್ರಾಂಶುಪಾಲ ಡಾ. ಹನುಮಂತ ಜಂಗೆ ವಂದಿಸಿದರು. ಡಾ. ಎಂ.ಬಿ. ಕಟ್ಟಿ ಕಾರ್ಯಕ್ರಮ ನಿರೂಪಿಸಿದರು.

# ಜಿಲ್ಲೆಯ ರೈತರು ಅತಿಹೆಚ್ಚು ಬೆಳೆವಿಮೆ ಪರಿಹಾರ ಪಡೆದುಕೊಂಡಿದ್ದಾರೆ:ಸಚಿವ ಪ್ರಿಯಾಂಕ್ ಖರ್ಗೆ

ಆಳಂದ:ನ.03:ಜಿಲ್ಲೆಯ ನಾಲ್ಕು ಲಕ್ಷಕ್ಕೂ ಅಧಿಕ ರೈತರಿಗೆ ರೂ 650 ಕೋಟಿ ಬೆಳೆವಿಮೆ ಪರಿಹಾರ ಸಿಕ್ಕಿದೆ. ಬಹುಶಃ ಇದು ರಾಜ್ಯದಲ್ಲೇ ಅತ್ಯಧಿಕ ಬೆಳೆವಿಮೆ ಪರಿಹಾರವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಆಳಂದ ಪಟ್ಟಣದ ವೀರಶೈವ ಲಿಂಗಾಯತ ಕಲ್ಯಾಣ ಮಂಟಪದಲ್ಲಿ ನಡೆದ ರೂ 225 ಕೋಟಿ ಬೆಳೆವಿಮೆ ದೊರಕಿಸಿಕೊಟ್ಟ ಸರ್ಕಾರಕ್ಕೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು

ಈ ಸಾಲಿನಲ್ಲಿ (2025-26) ಸುಮಾರು 3,00,952 ಜನ ರೈತರು ಬೆಳೆ ವಿಮೆ ನೋಂದಣಿ ಮಾಡಿಸಿಕೊಂಡಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ನೆಟೆರೋಗದಿಂದ ತೊಗರಿ ಹಾನಿಯಾಗಿದ್ದಾಗ ನ್ಯೆಯಾಪೈಸೆ ಪರಿಹಾರ ದೊರಕಿಸಿಕೊಡಲಿಲ್ಲ. ಆಗಲೂ ತೀವ್ರ ಮಳೆಯಿಂದ ಬೆಳೆ ಹಾನಿಯಾಗಿದ್ದವು ಆಗ ಸಿಎಂ ಆಗಿದ್ದ ಯಡಿಯೂರಪ್ಪ ವಿಮಾನ ನಿಲ್ದಾಣದಿಂದಲೇ ವಾಪಸ್ ಹೋಗಿದ್ದರು ಎಂದು ಅಂದಿನ ಸನ್ನಿವೇಶ ನೆನಪಿಸಿದರು.

ಈ ಸಲವೂ ಕೂಡಾ ಜಿಲ್ಲೆಯಲ್ಲಿ ಭಾರೀ ಮಳೆಯಿಂದ ಬೆಳೆ ಹಾನಿಯಾಗಿವೆ. ಸಿಎಂ ಸಿದ್ದರಾಮಯ್ಯ ಇಡೀ ದಿನ ಜಿಲ್ಲೆಯ ವೈಮಾನಿಕ ಸಮೀಕ್ಷೆ ನಡೆಸಿ, ಜನಪ್ರತಿನಿಧಿ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಎನ್ ಡಿ ಆರ್ ಎಫ್ ನಿಮಯಾವಳಿ ಪ್ರಕಾರ ಕೇಂದ್ರ ಕೊಡುವ ಪರಿಹಾರಕ್ಕೆ ರೂ 8,500 ಪ್ರತಿ ಹೆಕ್ಟೇರ್ ಗೆ ಸೇರಿಸಿ ಕೊಡುವ ವಾಗ್ದಾನ ಮಾಡಿದರು ಎಂದರು.

ರಾಜ್ಯ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರ ಆರ್ಥಿಕ ಸ್ಥಿತಿಗತಿ ಸುಧಾರಿಸಿದೆ ಎಂದ ಪ್ರಿಯಾಂಕ್ ಖರ್ಗೆ ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಹಾಗೂ ಅನ್ನಭಾಗ್ಯ ಯೋಜನೆಯ ಲಾಭ ಕೇವಲ ಕಾಂಗ್ರೆಸ್ ನವರು ಪಡೆಯುತ್ತಿಲ್ಲ, ಬಿಜೆಪಿಯವರೂ ಪಡೆಯುತ್ತಿದ್ದಾರೆ. ಆದರೂ ಯೋಜನೆಗಳನ್ನು ಟೀಕಿಸುತ್ತಾರೆ, ಸ್ವಲ್ಪನಾದರೂ ನಾಚಿಕೆ ಪಡಬೇಕು ಎಂದು ಕುಟುಕಿದರು.

ಆರ್ಟಿಕಲ್ 371 ಜೆ ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ವಾರ್ಷಿಕ ರೂ 5,000 ಕೋಟಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಪ್ರಮುಖ ಯೋಜನೆಗಳನ್ನು ಜಿಲ್ಲೆಗೆ ತಂದಿದೆ. ಇಎಸ್ ಐಸಿ, ಜಯದೇವಾ ದಂತ ಪ್ರಮುಖ ಆಸ್ಪತ್ರೆಗಳು, ಕೇಂದ್ರಿಯ ವಿವಿಯಂತ ಶೈಕ್ಷಣಿಕ ಕೇಂದ್ರಗಳ ಸ್ಥಾಪನೆ ಮಾಡಿದ್ದು ಕಾಂಗ್ರೆಸ್ ಪಕ್ಷ. ಅಭಿವೃದ್ಧಿ ವಿಚಾರದಲ್ಲಿ ಬಿಜೆಪಿ ಟೀಕೆ ಮಾಡಿದರೆ ಸ್ವಾಗತ ಆದರೆ ರಾಜಕೀಯ ಸಲುವಾಗಿ ಅನಗತ್ಯ ಟೀಕೆ ಹಾಗೂ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ಕಲ್ಯಾಣ ಪಥ ಹಾಗೂ ಪ್ರಗತಿ ಪಥ ಯೋಜನೆಯಡಿಯಲ್ಲಿ ರಸ್ತೆಗಳ ಸುಧಾರಣೆಗೆ ಕ್ರಮವಹಿಸಲಾಗಿದೆ. ಪ್ರಗತಿಪಥ ಯೋಜನೆಯಡಿಯಲ್ಲಿ ಸುಮಾರು 8,257 ಕಿಮಿ ದೂರದ ಗ್ರಾಮೀಣ ರಸ್ತೆಗಳ ಸುಧಾರಣೆಗೆ ಕ್ರಮವಹಿಸಲಾಗಿದೆ ಎಂದರು.

ಮತಗಳ್ಳತನ ವಿಚಾರ ಪ್ರಸ್ತಾಪಿಸಿದ ಸಚಿವರು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತಗಳ್ಳತನದ ಆರೋಪ ಮಾಡಿದ್ದರುಮ ಆದರೆ, ಬಿ.ಆರ್. ಪಾಟೀಲ್ ಅವರು ಮತಗಳ್ಳತನ ಕುರಿತಂತೆ ದಾಖಲೆ ಸಮೇತ ಸಾಬೀತುಪಡಿಸಿದ ನಂತರ ಮತಗಳ್ಳತನದ ಪ್ರಕರಣಕ್ಕೆ ತಿರುವುಪಡೆದುಕೊಂಡಿತು.








Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401